## ವಾರ್ಡ್ ನಂ: 83 ಕಾಡುಗುಡಿ ವಾರ್ಡ್‌ಕಮಿಟಿ ಸಭೆಯ ನಡುವಳಿಗಳು:-

ದಿನಾಂಕ: 15/03/2022 ರಂದು ಕಾಡುಗುಡಿ ವಾರ್ಡ್ ಸಂಖ್ಯೆ: 83ರ ವ್ಯಾಪ್ತಿಯಲ್ಲಿ ಮಾನ್ಯ ಆಯುಕ್ತರು, ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ರವರ ಕಛೇರಿ ಆದೇಶ ಸಂ:ಬಿ12(5)/ಪಿಆರ್/35/2020-21 ದಿನಾಂಕ: 21-09-2020 ಆದೇಶದಂತೆ ವಾರ್ಡ್ ಕಛೇರಿಯಲ್ಲಿ ಮಾನ್ಯ ವಾರ್ಡ್ ನೋಡಲ್ ಅಧಿಕಾರಿ, ಕಮಿಟಿಯ ಕಾರ್ಯದರ್ಶಿ, ಕಾಡುಗುಡಿ ವಾರ್ಡ್‌ನ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದವರು ಮತ್ತು ಸಾರ್ವಜನಿಕರ ಸಮಕ್ಷಮದಲ್ಲಿ ಸಭೆ ನಡೆಸಲಾಯಿತು.

**ಈ ಕೆಳಕಂಡ ಅಧಿಕಾರಿಗಳು ಹಾಗೂ ಸದಸ್ಯರು ಸಭೆಯಲ್ಲಿ ಭಾಗವಹಿಸಿರುತ್ತಾರೆ**

1. ಶ್ರೀ.ಡಿ.ಎಂ.ಮುನಿರೆಡ್ಡಿ, ಅಧ್ಯಕ್ಷರು ಹಾಗೂ ನೋಡಲ್ ಅಧಿಕಾರಿಗಳು.
2. ಶ್ರೀ.ಎನ್.ವೆಂಕಟೇಶ್, ಸಹಾಯಕ ಅಭಿಯಂತರರು ಮತ್ತು ಕಾರ್ಯದರ್ಶಿ.
3. ಅಕ್ಕಮಹಾದೇವಿ, ಹಿರಿಯ ಆರೋಗ್ಯ ನಿರೀಕ್ಷಕರು, ವಾರ್ಡ್ ನಂ:83, ಕಾಡುಗುಡಿ, ಬಿ.ಬಿ.ಎಂ.ಪಿ
4. ಡಾ॥ ಕಂತರಾಜು, ಆರೋಗ್ಯಾಧಿಕಾರಿಗಳು, ಪ್ರಾರ್ಥಮಿಕ ಆರೋಗ್ಯ ಕೇಂದ್ರ, ಕಾಡುಗುಡಿ.
5. ಶ್ರೀ.ಮಂಜುನಾಥ್, ದ್ವಿತಿಯ ದರ್ಜೆ ಸಹಾಯಕ/ವರ್ಕ್‌ಇನ್ಸ್‌ಪೆಕ್ಟರ್, ಕಾಡುಗುಡಿ ವಾರ್ಡ್ ನಂ.83
6. ಶ್ರೀ.ಅಂಜಿನಪ್ಪ, ಸಹಾಯಕ ಸಬ್‌ಇನ್ಸ್‌ಪೆಕ್ಟರ್, ಕಾಡುಗುಡಿ ಪೋಲೀಸ್ ಠಾಣೆ.
7. ಶ್ರೀ.ಸುರೇಶ್, ಜೆ.ಇ. ಬೆಸ್ಕಾಂ
8. ಶ್ರೀ.ವಿ.ರವಿಚಂದ್ರ, ಎ.ಇ, ರಸ್ತೆಮೂಲಭೂತ ಸೌಕರ್ಯ ವಿಭಾಗ, ಮಹದೇವಪುರ
9. ಡಾ॥ ವಂದನಾ, ಆರೋಗ್ಯಾಧಿಕಾರಿಗಳು, ಪ್ರಾರ್ಥಮಿಕ ಆರೋಗ್ಯ ಕೇಂದ್ರ, ಕಾಡುಗುಡಿ.
10. ಶ್ರೀ.ಕುಪೇಂದ್ರ, ಸಬ್‌ಇನ್ಸ್‌ಪೆಕ್ಟರ್, ಕಾಡುಗುಡಿ ಪೋಲೀಸ್ ಠಾಣೆ,
11. ಶ್ರೀ.ಮನೋಜ್ ಕುಮಾರ್, ಕಂದಾಯ ಪರಿವೀಕ್ಷಕರು, ಕಾಡುಗುಡಿ ವಾರ್ಡ್ ನಂ.83
12. ಶ್ರೀ.ಪಿ.ಸುದರ್ಶನ್, ಕಂದಾಯ ವಸೂಲಿಗಾರ, ಕಾಡುಗುಡಿ ವಾರ್ಡ್ ನಂ.83
13. ಶ್ರೀ.ಶ್ರೀನಿವಾಸ್, ಕಂದಾಯ ವಸೂಲಿಗಾರ, ಕಾಡುಗುಡಿ ವಾರ್ಡ್ ನಂ.83
14. ಶ್ರೀ.ವೆಂಕಟೇಶ್, ಸಿಬ್ಬಂದಿ, ಬಿ.ಬಡ್ಲ್ಯೂ.ಎಸ್.ಎಸ್.ಬಿ
15. ಶ್ರೀ.ಹನುಮಂತಪ್ಪ, ಸಿಬ್ಬಂದಿ, ಬಿ.ಬಡ್ಲ್ಯೂ.ಎಸ್.ಎಸ್.ಬಿ

**ಕಾಡುಗುಡಿ ವಾರ್ಡ್‌ನ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘ ದವರು ಮತ್ತು ಸಾರ್ವಜನಿಕರು**

| | |
|---|---|
| 1. ಸಂಗಧೀರ್ | 18. ಸಂಪಂಗಿ |
| 2. ಗೋಪಾಲ್ | 19. ಎಸ್.ಮಾರಪ್ಪ |
| 3. ಸಂದೀಪ್ ಅನಿರುಧ್ | 20. ಗವಾಸ್ಕರ್ ನಾಯ್ಕ್ |
| 4. ಡಾ॥ ಸಾಯಿ ಕೀರ್ತಿ | 21. ಸುಮನ್ ಸೇನಾಪತಿ |
| 5. ಪುರುಷೋತಮ್ | 22. ರವಿ-ಗುಟ್ಟ |
| 6. ಜಗದೀಶ್ | 23. ಗೋಪಾಲ್‌ಗುಟ್ಟ |
| 7. ಸಂದ್ಯಾ ಪ್ರಕಾಶ್ | 24. ರವಿ-ಕೇಬಲ್ |
| 8. ಪತಾಂಜಲಿ | 25. ವಿನೋದ್‌ಕುಮಾರ್ ಜಗದೀಶ್ವರಿ |
| 9. ಹರ್ಷ | 26. ಮುನಿಲಕ್ಷ್ಮಿ |
| 10. ಭಾಗ್ಯ | 27. ಅನಿತ |
| 11. ಶಿವಕುಮಾರ್ ಪಾಟೀಲ್ | 28. ಮಂಜುಳ |
| 12. ವೆಂಕಟೇಶ್‌ಗೌಡ | 29. ಆನಂದ್‌ಕುಮಾರ್ |
| 13. ಹರಿಪ್ರಸಾದ್‌ರೆಡ್ಡಿ | 30. ಗೌತಮ್ ಮಿಶ್ರ |
| 14. ಪಿ.ಜೆ.ವೇಲು | 31. ಎನ್.ಎಂ.ಗೋಪಾಲ್ |
| 15. ನಾರಾಯಣ್‌ರೆಡ್ಡಿ | 32. ದಿಲೀಪ್ |
| 16. ನಾಗರಾಜ್‌ರೆಡ್ಡಿ | 33. ಪ್ರಮೀಳ |
| 17. ಹನುಮಾನ ಬಾಬು | |



Scanned with C

ಸಭೆಯಲ್ಲಿ ಹಾಜರಿದ್ದ ನೋಡಲ್ ಅಧಿಕಾರಿಗಳು, ಕಮಿಟಿಯ ಕಾರ್ಯದರ್ಶಿಗಳು, ಹಿರಿಯ ಆರೋಗ್ಯ ನಿರೀಕ್ಷಕರು, ಕಾಡುಗುಡಿ ವಾರ್ಡ್‌ನ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದವರು ಮತ್ತು ಸಾರ್ವಜನಿಕರು ಉಪಸ್ಥಿತಿಯಲ್ಲಿದ್ದು, ಹಿರಿಯ ಆರೋಗ್ಯ ನಿರೀಕ್ಷಕರು ಸ್ವಾಗತಾ ಕೋರಿದ ನಂತರ ನೋಡಲ್ ಅಧಿಕಾರಿಗಳು ಕಲಾಪವನ್ನು ಪ್ರಾರಂಭಿಸಲು ಸೂಚಿಸಿದರು.

1. ಹಿಂದಿನ ಸಭೆಯಲ್ಲಿ ನಡೆದ ನಡವಳಿಗಳ ವರದಿಯನ್ನು ಅನುಷ್ಠಾನಗೊಂಡಿರುವ ಬಗ್ಗೆ ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳ ಮಾಹಿತಿಯನ್ನು ಪಡೆದು, ಸಾರ್ವಜನಿಕರ ಮುಂದೆ ಮಂಡಿಸಲಾಯಿತು.

2. ಸಭೆಯಲ್ಲಿ ಶ್ರೀ.ರವಿ, ರವರು ಅಂಬೇಡ್ಕರ್‌ಗುಟ್ಟ ವ್ಯಾಪ್ತಿಯಲ್ಲಿ ನೀರು ಸರಬರಾಜು ಸರಿ ಇಲ್ಲದಿರುವುದರಿಂದ, ಸಾರ್ವಜನಿಕರಿಗೆ ತುಂಬಾ ಅನಾನುಕೂಲವಾಗಿರುತ್ತದೆ ಎಂದು ಸಭೆಯಲ್ಲಿ ಕೋರಿರುತ್ತಾರೆ. ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ.ರವಿ ಕುಮಾರ್, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಹಿಂದಿನ ದಿನವಷ್ಟ ಬೂಸ್ಟರ್ ದೋಸ್ ಅಳವಡಿಸಿದ್ದು, ಮುಂದಿನ ದಿನಗಳಲ್ಲಿ ನೀರು ಸರಾಗವಾಗಿ ಸರಬರಾಜಾಗುವ ಬಗ್ಗೆ ತಿಳಿಸಿದರು.

3. ಸಭೆಯಲ್ಲಿ ಸಾರ್ವಜನಿಕರು ಶ್ರೀ.ಪುರುಶೋಥಮ್ ರವರು ಪ್ರಶಾಂತ್ ಬಡಾವಣೆಯಲ್ಲಿ ಸುಮಾರು 15 ದಿನಗಳಿಂದ ನೀರು ಸರಬರಾಜು ಇರುವುದಿಲ್ಲವೆಂದು ತಿಳಿಸಿದರು. ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ.ರವಿ ಕುಮಾರ್, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಆ ಬಡಾವಣೆಯಲ್ಲಿ 600 ಎಂ.ಎಂ. ವಾಲ್ವ್‌ನ್ನು ಅಳವಡಿಸಬೇಕಾಗಿರುವುದರಿಂದ ಸುಮಾರು 01 ತಿಂಗಳ ಕಾಲಾವಕಾಶ ಬೇಕೆಂದು ಕೋರಿದರು.

4. ಸಭೆಯಲ್ಲಿ ಶ್ರೀ.ಸಂಗಧೀರ್ ರವರು ಕಾಡುಗುಡಿ ವಾರ್ಡ್‌ನಲ್ಲಿ ಅಭಿವೃದ್ಧಿ ಕಾಮಗಾರಿಗಳು ನಡೆಯುತ್ತಿರುವುದರಿಂದ ಬಿ.ಡಬ್ಲ್ಯೂ.ಎಸ್.ಎಸ್.ಬಿ ಇಲಾಖೆಯವರು ರಸ್ತೆ ಕಾಮಗಾರಿ ಮಾಡುವ ಮುಂಚಿತವಾಗಿ ಒಳಚರಂಡಿ ಪೈಪ್‌ಲೈನ್‌ಗಳನ್ನು ಅಳವಡಿಸಬೇಕೆಂದು ಕೋರಿದರು. ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ.ರವಿ ಕುಮಾರ್, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಮೇಲಾಧಿಕಾರಿಗಳಿಗೆ ತಿಳಿಸಿ, ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

5. ಸಭೆಯಲ್ಲಿ ಶ್ರೀ.ಸಂಗಧೀರ್ ರವರು ಎ.ಬಿ. ವಾಜಪೇಯಿ ರಸ್ತೆಯಲ್ಲಿ ನೀರು ಸರಬರಾಜು ಕೊಳವೆಯ ವಾಲ್ವ್ ಒಂದು ರಿಪೇರಿಗೆ ಬಂದಿದ್ದು, ಕೂಡಲೇ ಸದರಿ ವಾಲ್ವ್‌ನ್ನು ಸರಿಪಡಿಸಲು ಕೋರಿದರು. ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ಶ್ರೀ.ರವಿ ಕುಮಾರ್, ಸಹಾಯಕ ಅಭಿಯಂತರರು, ಬಿ.ಡಬ್ಲ್ಯೂ.ಎಸ್.ಎಸ್.ಬಿ ರವರು ಕ್ರಮ ಕೈಗೊಳ್ಳುವುದಾಗಿ ತಿಳಿಸಿದರು.

6. ಸಭೆಯಲ್ಲಿ ಡಾ॥ ವಂದನ, ರವರು ಕೋವಿಡ್-19ಕ್ಕೆ ಸಂಬಂಧಿಸಿದಂತೆ ಪ್ರಸ್ತುತ ಬೂಸ್ಟರ್ ದೋಸ್‌ಗಳನ್ನು 60 ವರ್ಷ ಮೇಲ್ಪಟ್ಟವರಿಗೆ ಹಾಗೂ 14 ವರ್ಷ ಕೆಳಪಟ್ಟವರಿಗೆ ವಾಕ್ಸಿನೇಷನ್ ಕೊಡುತ್ತಿರುವುದು ಪ್ರಗತಿಯಲ್ಲಿದೆ ಎಂದು ತಿಳಿಸಿದರು.

7. ಸಭೆಯಲ್ಲಿ ಶ್ರೀ.ಪುರುಷೋತಮ್, ಪ್ರಶಾಂತ್ ಬಡಾವಣೆ ರವರು ಪ್ರಶಾಂತ್ ಬಡಾವಣೆಯಲ್ಲಿ ಬೆಸ್ಕಾಂ ವತಿಯಿಂದ ಅಗೆದಿರುವ ರಸ್ತೆಗಳನ್ನು ಪುನರ್ ನಿರ್ಮಾಣ ಮಾಡಲು ಕೋರಿದರು. ಸದರಿ ವಿಷಯಕ್ಕೆ ಶ್ರೀ.ಗಂಗರಾಜ್ ರವರು ಬಿ.ಬಿ.ಎಂ.ಪಿ ವತಿಯಿಂದ ರಸ್ತೆ ಮರುನಿರ್ಮಾಣಕ್ಕೆ ಪ್ರಸ್ತಾವನೆಯನ್ನು ಬೆಸ್ಕಾಂ ವತಿಯಿಂದ ಪ್ರಯತ್ನಿಸುತ್ತಿರುವುದಾಗಿ ತಿಳಿಸಿದರು.



Scanned with C

8. ಸಭೆಯಲ್ಲಿ ಶ್ರೀ.ಗೋಪಾಲ್ ಅಂಬೇಡ್ಕರ್‌ಗುಟ್ಟ ರವರು ಹೋಪ್ ಫಾರಂ ಸಿಂಗ್ನಲ್‌ನಲ್ಲಿ ಸಾರ್ವಜನಿಕರಿಗೆ ತೊಂದರೆಯಾಗುತ್ತಿದ್ದು, ಸದರಿ ಸ್ಥಳದಲ್ಲಿ ಫ್ರೀ ಟರ್ನ್‌ನ್ನು ಅಳವಡಿಸಬೇಕೆಂದು ಕೋರಿದರು. ಸದರಿ ವಿಷಯಕ್ಕೆ ಟ್ರಾಫೀಕ್ ಎ.ಎಸ್.ಐ ರವರು ವಿಷಯವನ್ನು ತಮ್ಮ ಮೇಲಾಧಿಕಾರಿಗಳಿಗೆ ತಿಳಿಸಿದರು.

9. ಸಭೆಯಲ್ಲಿ ಶ್ರೀ.ರವಿ, ರವರು ಅಂಬೇಡ್ಕರ್‌ಗುಟ್ಟ ವ್ಯಾಪ್ತಿಯಲ್ಲಿ ಬೆಸ್ಕಾಂ ವತಿಯಿಂದ ಈಗಾಗಲೇ ಅಗೆದಿರುವ ರಸ್ತೆಯಲ್ಲಿ ಡೆಬ್ರೀಸ್‌ನ್ನು ತೆಗೆಯದೆ ಸಾರ್ವಜನಿಕರಿಗೆ ತುಂಬಾ ಅನಾನುಕೂಲವಾಗುವುದಾಗಿ ತಿಳಿಸಿದರು. ಸದರಿ ವಿಷಯಕ್ಕೆ ಶ್ರೀ.ಸುರೇಶ್, ಜೆ.ಇ. ಬೆಸ್ಕಾಂ ರವರು ಮೇಲಾಧಿಕಾರಿಗಳಿಗೆ ತಿಳಿಸಿದರು.

10. ಸಭೆಯಲ್ಲಿ ಶ್ರೀಸಾಯಿ ಡಿ-ಸಿಲ್ವಾ ಬಡಾವಣೆ ರವರು ಬೆಸ್ಕಾಂ ರವರು 05 ಹೊಸದಾಗಿ ಕಂಬಗಳನ್ನು ಹಾಗೂ ವಿದ್ಯುತ್‌ಚ್ಛಕ್ತಿ ದೀಪಗಳನ್ನು ಅಳವಡಿಸಲು ಕೋರಿದರು. ಸದರಿ ವಿಷಯಕ್ಕೆ ಶ್ರೀ.ಸುರೇಶ್, ಜೆ.ಇ. ಬೆಸ್ಕಾಂ ರವರು ಮೇಲಾಧಿಕಾರಿಗಳ ಗಮನಕ್ಕೆ ತರುವುದಾಗಿ ತಿಳಿಸಿದರು.

11. ಸಭೆಯಲ್ಲಿ ಸಾರ್ವಜನಿಕರು ಮೇಜರ್ ರಸ್ತೆಗಳಲ್ಲಿ ರಸ್ತೆಗುಂಡಿಗಳನ್ನು ಶ್ರೀಘ್ರವಾಗಿ ಮುಚ್ಚಲು ಕೋರಿದರು. ಸದರಿ ವಿಷಯಕ್ಕೆ ಶ್ರೀ.ರವಿಚಂದ್ರ, ಸ.ಅ (ರ.ಮೂ.ಭೂ.ಸೌ) ರವರು ಕಾಮಗಾರಿ ಪ್ರಗತಿಯಲ್ಲಿ ಇರುವುದಾಗಿ ತಿಳಿಸಿದರು.

12. ಸಭೆಯಲ್ಲಿ ಸಾರ್ವಜನಿಕರು ಚನ್ನಸಂದ್ರ ಗ್ರಾಮದಿಂದ ಕಾಡುಗುಡಿ ಗ್ರಾಮದ ರಸ್ತೆಯಲ್ಲಿ ಸಂತೆ ನಡೆಯುತ್ತಿದ್ದು, ಸಾರ್ವಜನಿಕರ ಓಡಾಟಕ್ಕೆ ತೊಂದರೆಯಾಗುತ್ತಿರುವುದಾಗಿ ತಿಳಿಸಿದರು. ಸದರಿ ವಿಷಯಕ್ಕೆ ನೋಡಲ್ ಅಧಿಕಾರಿ ರವರು ಸಂತೆ ನಡೆಯುವ ಬಗ್ಗೆ ಎ.ಆರ್.ಓ ವೈಟ್‌ಫೀಲ್ಡ್ ರವರ ಬಳಿ ಚರ್ಚಿಸಲು ಕಾರ್ಯದರ್ಶಿಗಳಿಗೆ ತಿಳಿಸಿದರು.

13. ಸಭೆಯಲ್ಲಿ ಸಂಪಂಗಿ, ಎ.ಕೆ.ಜಿ ಕಾಲೋನಿ ರವರು ಸರ್ವೆ ನಂ.115 ರಲ್ಲಿ ಗೋಮಾಳ ಜಮೀನು ಇದ್ದು, ಸದರಿ ಜಮೀನಿನಲ್ಲಿ ರಸ್ತೆ ನಿರ್ಮಾಣ ಮಾಡಿಕೊಡಬೇಕೆಂದು ಕೋರಿದರು. ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ವಾರ್ಡ್ ಕಾರ್ಯದರ್ಶಿಗಳು ಗೋಮಾಳ ಸ್ವತ್ತು ತಹಶೀಲ್ದಾರ್, ಕೆ.ಆರ್.ಪುರ ರವರ ಅಡಿಯಲ್ಲಿ ಬರುವುದರಿಂದ, ಹಾಗೂ ಜಮೀನಿನ ಬಗ್ಗೆ ನ್ಯಾಯಾಲಯದಲ್ಲಿ ದಾವೆ ಇದ್ದು, ತಹಶೀಲ್ದಾರ್ ರವರು ಸದರಿ ಸ್ವತ್ತನ್ನು ಬಿಬಿಎಂಪಿ ವ್ಯಾಪ್ತಿಗೆ ಹಸ್ತಾಂತರಿಸಿದ ನಂತರ ಕ್ರಮ ಕೈಗಳ್ಳುವುದಾಗಿ ತಿಳಿಸಿದರು.

14. ಸಭೆಯಲ್ಲಿ ಸಾರ್ವಜನಿಕರು, ನೀರಿನ ಅಭಾವ ಮುಂದಿನ ದಿನಗಳಲ್ಲಿ ಹೆಚ್ಚಾಗುವುದರಿಂದ, ಕೂಡಲೇ ಹೊಸದಾಗಿ ಬೋರ್‌ವೆಲ್‌ಗಳನ್ನು ಕೊರೆಯುವ ಬಗ್ಗೆ ಕೋರಿದರು. ಸದರಿ ವಿಷಯಕ್ಕೆ ಟೆಂಡರ್ ಪ್ರಕ್ರಿಯೆ ಮುಗಿದ ಕೂಡಲೇ ಬೋರ್‌ವೆಲ್ ಕೊರೆಯುವುದಾಗಿ ತಿಳಿಸಿದರು.

15. ವಾರ್ಡ್ ನಂ.83ರ ಒಂಟಿ ಮನೆ ಸಂಬಂಧಿಸಿದಂತೆ, ಈಗಾಗಲೇ ನಿವೇಶಗಳಿರುವ ಫಲಾನುಭವಿಗಳ ಹೆಸರಿರುವ ಅರ್ಜಿಗಳನ್ನು ತಮ್ಮ ಕಛೇರಿಗೆ ಸಲ್ಲಿಸಿದ್ದು, ಅದರ ಬಗ್ಗೆ ಮಾಹಿತಿ ನೀಡುವ ಬಗ್ಗೆ ಕೋರಿದರು. ಸದರಿ ವಿಷಯಕ್ಕೆ ಸಂಬಂಧಿಸಿದಂತೆ ವಾರ್ಡ ಅಭಿಯಂತರರು, 2020-21 ಮತ್ತು 2021-22ರ ಅನುದಾವು ಸರ್ಕಾರದಿಂದ ಬಂದಲ್ಲಿ, ಕೂಡಲೇ ಫಲಾನುಭವಿಗಳ ಆಯ್ಕೆ ಮಾಡಲು ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಸಿದರು.



Scanned with

ಅಂತಿಮವಾಗಿ ನೋಡಲ್ ಅಧಿಕಾರಿಗಳು ಸಕಾಲದಲ್ಲಿ ಸಾರ್ವಜನಿಕರ ಕುಂದು ಕೊರತೆಗಳನ್ನು ಆಲಿಸಿ ಸ್ಪಂದಿಸಿ ಪರಿಹರಿಸಲು ಕ್ರಮ ತೆಗೆದುಕೊಳ್ಳುವಂತೆ ಹಾಗೂ ಸಂಬಂಧಪಟ್ಟ ಎಲ್ಲಾ ಇಲಾಖೆಗಳು ಸಮನ್ವತೆಯಿಂದ ಕೆಲಸ ನಿರ್ವಹಿಸಲು ಸೂಚಿಸಿರುತ್ತಾರೆ. ನೋಡಲ್ ಅಧಿಕಾರಿ ರವರ ಸೂಚನೆಯಂತೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

15/3/2022

(ಎನ್.ವೆಂಕಟೇಶ್)

ಸಹಾಯಕ ಅಭಿಯಂತರರು ಹಾಗೂ ವಾರ್ಡ್ ಕಮಿಟಿ ಕಾರ್ಯದರ್ಶಿ

ವಾರ್ಡ್ ನಂ: 83 ಕಾಡುಗುಡಿ

**ಪ್ರತಿಯನ್ನು**

1. ಮಾನ್ಯ ಜಂಟಿ ಆಯುಕ್ತರು, ಬಿ.ಬಿ.ಎಂ.ಪಿ ಮಹದೇವಪುರ ವಲಯ, ರವರ ಮಾಹಿತಿಗಾಗಿ ಸಲ್ಲಿಸಿದೆ.
2. ಮಾನ್ಯ ಮುಖ್ಯ ಅಭಿಯಂತರರು, ಬಿ.ಬಿ.ಎಂ.ಪಿ ಮಹದೇವಪುರ ವಲಯ, ರವರ ಮಾಹಿತಿಗಾಗಿ ಸಲ್ಲಿಸಿದೆ.
3. ಕಾರ್ಯಪಾಲಕ ಅಭಿಯಂತರರು, ಬಿ.ಬಿ.ಎಂ.ಪಿ ಮಹದೇವಪುರ ವಲಯ, ರವರ ಮಾಹಿತಿಗಾಗಿ ಸಲ್ಲಿಸಿದೆ.
4. ಎಲ್ಲಾ ಸದಸ್ಯರುಗಳಿಗೆ ಮಾಹಿತಿಗಾಗಿ



Scanned with